## ಅಪರೂಪದ ಕಲಾವಿದನ ಪರಿಚಯ

‘ಇಪ್ಪತ್ತೈದು ವಾದ್ಯ ನಿಪುಣ ಪ್ರಸನ್ನ’ (ಡಿ.22, ಉಮಾ ಅನಂತ್), ಪ್ರಸನ್ನರ ನಾದ ಪಯಣದ ಯಶಸ್ಸಿನ ಚೈತ್ರಯಾತ್ರೆಯಂತೆಯೇ ಕಂಡಿತು. ಇವರ ಪ್ರಯತ್ನದ ಒಂದೊಂದು ಮೆಟ್ಟಿಲುಗಳೂ ವಿಶಿಷ್ಟ ಎನಿಸಿದವು. ಇಂಥ ಅಪರೂಪದ ಕಲಾವಿದರ ಪರಿಚಯ ಇನ್ನಷ್ಟು ಆಗಲಿ...

–ಸುಧಿ ಎಚ್. ಹಳ್ಳಿ

## ಹಾವಸೆಯ ಉಪಯುಕ್ತ ಮಾಹಿತಿ

‘ಹಸುರು ತೋರಣ ಮರಗಳಿಗೆ ಆಭರಣ’ (ಡಿ.22, ರಾಜು ಎಲ್.ಎಸ್.) ಮರಗಳ ಕಥೆಯ ಲೇಖನ ಸುಂದರವಾಗಿದೆ. ಶಿಶಿರ ಋತುವಿನ ಸಮಯ ಮರಗಳಲ್ಲಿ, ಅದರಲ್ಲೂ ವಿಶೇಷವಾಗಿ ಮಲೆನಾಡಿನ ಪರಿಸರದ ಮರಗಳಲ್ಲಿ ಮೂಡುವ ಹಾವಸೆಗಳ ಕುರಿತು ಸೂಕ್ತ ಮಾಹಿತಿ ನೀಡಿದ್ದಾರೆ. ಪಾಚಿ ಸಸ್ಯವಾಗಿರುವ ಹಾವಸೆ ಮರಗಳಿಗೆ ರಕ್ಷಣೆ ನೀಡುತ್ತವೆ ಎಂಬುದನ್ನು ಕೇಳಿ ಅಚ್ಚರಿ ಮೂಡಿತು.

–ನೆ.ಲ. ರಾಮಮೂರ್ತಿ, ಬೆಂಗಳೂರು

## ಮಹಿಳೆಯರ ಸಾಧನೆ ಎತ್ತಿಹಿಡಿದ ಲೇಖನ

‘ಎಡಾ ಲವ್ಲೇಸ್; ಕಂಪ್ಯೂಟರ್ ಲೋಕದ ಮಿನುಗುತಾರೆ’ (ಡಿ.22, ಸರೋಜಾ ಪ್ರಕಾಶ) ಉತ್ತಮ ಬರಹ. 1800ರ ಮಧ್ಯಭಾಗದಲ್ಲೇ, ಉತ್ಕೃಷ್ಟ ಗಣಿತ ಆಧಾರಿತ ಗಣಕಯಂತ್ರದ ಕೊಡುಗೆ ನೀಡಿ, ಹೆಣ್ಣುಮಕ್ಕಳು ಶತಮಾನಗಳಿಂದಲೇ ಪುರುಷರಿಗೆ ಸಮಾನವಾಗಿ ಸ್ಪಂದಿಸಬಲ್ಲರು

## ಸರಳ ಧಾಟಿಯ ಕಥೆ

‘ಹೊಕ್ಕಳಬಳ್ಳಿ’ (ಡಿ.22, ಡಾ. ಗೀತಾ ಸೀತಾರಾಮ) ಕಥೆ ಭಾವನಾತ್ಮಕವಾಗಿ ಮೂಡಿಬಂದಿದೆ. ಸರಳ ಮತ್ತು ಸಹಜ ಧಾಟಿಯಿಂದ ಓದಿಸಿಕೊಂಡು ಹೋಗುತ್ತದೆ. ಹೆತ್ತ ತಾಯಿಯ ಮನೋಭಾವವನ್ನು ಸುಲಲಿತವಾಗಿ ಕಥೆಯಲ್ಲಿ ದಾಟಿಸಿದ್ದಾರೆ.

–ಶೈಲಾ ಜೋಷಿ

‘ಹೊಕ್ಕಳಬಳ್ಳಿ’ ಕಥೆ ಮನಮಿಡಿಯುವಂತಿದೆ. ತಾಯಿಯ ಅಂತಃಕರಣವನ್ನು ಭಾವನಾತ್ಮಕವಾಗಿ ಕಟ್ಟಿಕೊಟ್ಟ ರೀತಿ ಸೊಗಸಾಗಿದೆ.

–ಡಾ. ಕರ್ನಲ್ ಜಯಂತ ರಿಸಬೂಡ್



## ಸಿನಿರಂಗದ ಸಂಪೂರ್ಣ ದಾಖಲೆ

‘ಸಂಕಟದ ಕಡಲೊಳು ಗೆಲುವಿನ ಕಿರುಹಣತೆ’ (ಡಿ.22, ರಘುನಾಥ ಚ.ಹ.) ಲೇಖನ ಕೊರೊನಾನಂತರ 2022ರಲ್ಲಿ ಕನ್ನಡ ಚಲನಚಿತ್ರ ರಂಗ ನಡೆದ ಹಾದಿ, ಚೇತರಿಕೆ ಹಾಗೂ ಬೆಳವಣಿಗೆ ಬಗ್ಗೆ ಸವಿಸ್ತಾರ ಚಿತ್ರಣ ಕೊಟ್ಟಿದೆ. ಕನ್ನಡ ಸಿನಿಮಾ ರಂಗದ ವರ್ಷದ ಪ್ರಯಾಣವನ್ನು ಸರಳವಾಗಿ ದಾಖಲಿಸಲಾಗಿದೆ.

–ಟಿ.ಡಿ. ಗದಗಕರ್, ಹುಬ್ಬಳ್ಳಿ



## ಸವಿವರ ಮಾಹಿತಿ

‘ಸಂಕಟದ ಕಡಲೊಳು ಗೆಲುವಿನ ಕಿರುಹಣತೆ’ ಲೇಖನ, ಚಲನಚಿತ್ರ ಕ್ಷೇತ್ರದ ವರ್ಷದ ರೂಪುರೇಷೆಯನ್ನು ತೆರೆದಿಟ್ಟಿತ್ತು. ವರ್ಷದಲ್ಲಿ ಬಿಡುಗಡೆಯಾದ ಕನ್ನಡ ಸಿನಿಮಾಗಳು, ಅವುಗಳ ಸೋಲು ಗೆಲುವಿನ ಕುರಿತ ಪರಿಪೂರ್ಣ ಬರಹವಾಗಿದೆ. 2022ರ ಅಂಚಿನಲ್ಲಿ, ಈ ಸಿನಿಮಾ ಜಗತ್ತಿನ ಆಗುಹೋಗುಗಳನ್ನು ಲೇಖನ ವಿವರವಾಗಿ ತಿಳಿಸಿದೆ.

–ಶ್ರೀನಿವಾಸ ಕೆ. ಉಪಾಧ್ಯ, ಉಡುಪಿ

ಎಂಬುದನ್ನು ಲೇಖನ ತೆರೆದಿಟ್ಟಿದೆ. ಗಣಿತ, ವಿಜ್ಞಾನದ ವಿಷಯವನ್ನು ಸರಳವಾಗಿ ನಿರೂಪಿಸಿದ್ದು ಶ್ಲಾಘನೀಯ. ಇದರೊಂದಿಗೆ, ‘ನಿಮ್ಮೊಡನೆ’, ಸಾಲದ ಕುರಿತು ಅರ್ಥಗರ್ಭಿತ ಮಾಹಿತಿ, ಎಚ್ಚರಿಕೆಯನ್ನೂ ನೀಡಿದೆ.

– ಎ.ಬಿ. ಮಾಲತಿ, ಮೈಸೂರು

## ಮನೋಜ್ಞ ಧಾರಾವಾಹಿ

ವಸುಮತಿ ಉಡುಪ ಅವರ ಹೊಸ ಧಾರಾವಾಹಿ ‘ಅಂತಃಪುರ’ ಮನೋಜ್ಞವಾಗಿದೆ. ಮೊದಲ ಕಂತಿನಲ್ಲಿಯೇ ಸರಳವಾಗಿ ಆರಂಭಿಸಿರುವುದು ಮನಸೂರೆಗೊಂಡಿದೆ. ಧಾರಾವಾಹಿ ಹೀಗೇ ಮುಂದುವರೆಯಲಿ.

–ಮೇಘನಾ ರಘುನಂದನ್, ಹೂವಿನ ಹಡಗಲಿ

‘ಅಂತಃಪುರ’ ಕಾದಂಬರಿ ಶುರುವಾಗಿದ್ದಕ್ಕೆ ತುಂಬಾ ಸಂತೋಷವಾಗಿದೆ. ವಸುಮತಿ ಅವರ ಕಥೆಗಳು ಸರಳವಾಗಿ ಓದಿಸಿಕೊಂಡು ಹೋಗುತ್ತವೆ ಹಾಗೂ ಮತ್ತೆ ಮತ್ತೆ ಓದುವಂತೆ ಪ್ರೇರೇಪಿಸಿ ಮನಮುಟ್ಟುವಂತೆ ಇರುತ್ತವೆ.

–ವಸಂತಿ ಪಾರಂಪಳ್ಳಿ

## ಹಾಸ್ಯಭರಿತ ನಿರೂಪಣೆ

‘ಉಪ್ಪಿಟ್ಟೋ, ಉಪ್ಪಿಟ್ಟು ಗೋವಿಂದ’ (ಡಿ.22, ಪ್ರಸನ್ನ) ಬರಹ ಸೊಗಸಾಗಿದೆ. ಉಪ್ಪಿಟ್ಟಿನ ಕುರಿತ ಸಂಗತಿಗಳನ್ನು ಹಾಸ್ಯಭರಿತವಾಗಿ ನಿರೂಪಿಸಿದ್ದಾರೆ. ಸಾಮಾನ್ಯ ಸಂಗತಿಗಳೂ ಹೇಗೆ ಮಂದಹಾಸ ತರಬಲ್ಲವು ಎಂಬುದನ್ನು ಲೇಖನ ಮನಗಾಣಿಸಿದೆ.

–ಟಿ.ಎಲ್. ರಾಮಕೃಷ್ಣ, ಬೆಂಗಳೂರು

## ಸಂಗೀತ- ಸಂವಾದ

‘ಸಂಗೀತ ಬಾನಿನ ಲಾಲ್ಗುಡಿ ಬಾನಿ’ (ಡಿ.15, ಉಮಾ ಅನಂತ್) ಲೇಖನದಲ್ಲಿ ಲಾಲ್ಗುಡಿ ಜಿಜೆಆರ್ ಕೃಷ್ಣನ್ ಮತ್ತು ಅವರ ಸಹೋದರಿ ವಿಜಯಲಕ್ಷ್ಮಿರವರ ಸಂವಾದ–ಸಂದರ್ಶನ ಚೆನ್ನಾಗಿದೆ. ಜಯರಾಮನ್ ಅವರ ವಯೊಲಿನ್ ಕೇಳಿ ನಾವು ಸಂತಸಪಟ್ಟಿದ್ದೇವೆ. ಈ ಸಂಗೀತ ಸಾಧಕರ ಪರಿಚಯ ಓದಿದ್ದು ಸಂತಸವಾಯಿತು.

–ಕೊಮರ್ಲ ಸತ್ಯನಾರಾಯಣ, ಬೆಂಗಳೂರು

## ಮನಸ್ಸು ತಟ್ಟಿದ ಚಿತ್ರ-ಲೇಖನ



‘ಮಳೆ ಮಂಜಿನ ಹಾಡಲಿ ಕಾಡುವ ಕೋಟೆ’ ಶೀರ್ಷಿಕೆಯ (ಡಿ.22, ಪ್ರಸಾದ್ ಶೆಣೈ ಆರ್.ಕೆ.) ಸಿಂಹಗಢ ಕೋಟೆ ಕುರಿತ ಚಿತ್ರ –ಲೇಖನವನ್ನು ಓದುತ್ತಿದ್ದಂತೆ ಹಸಿರ ಚಾದರ ಹೊದ್ದ ಮೋಹಕತೆ ಅನುಭವಕ್ಕೆ ಬರುವುದು. ಲೇಖನ ಓದಿದ ನಂತರ ಅಲ್ಲಿಗೆ ಹೊರಟೇಬಿಡುವ ಅನ್ನಿಸಿತು. ಲೇಖನ, ಪ್ರವಾಸಿಗಳಿಗೆ ಉತ್ತಮ ಮಾರ್ಗದರ್ಶಿ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಸಂಗ್ರಹಯೋಗ್ಯ ಲೇಖನ

‘ಪ್ರಜಾಪ್ರಭುತ್ವವಾದಿಯ ರಾಜಗೃಹ’ (ಡಿ.15, ಎಂ.ಎಸ್. ಆಶಾದೇವಿ) ಅಂಬೇಡ್ಕರ್ ಅವರ ಕುರಿತು ಎದೆಯಾಳದಲ್ಲಿ ಹಚ್ಚಿಟ್ಟ ಪ್ರಣತಿಯಂತೆ ಕಂಡಿತು. ಸಂಗ್ರಹಯೋಗ್ಯ ಲೇಖನ ಎನಿಸಿತು.

–ಮಂಜುನಾಥ ಸಿ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in